ಮೀಟಿಂಗ್‌ನಲ್ಲಿ ತೋರಿಸಬೇಕೆಂದು ನಾನು ಆದೇಶ ಮಾಡಿದ್ದೇನೆ. ಹಾಗೆ ಮಾಡದಿದ್ದರೆ ನಾನು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಆ ಜಿಲ್ಲೆಯಲ್ಲಿ ನಾವು ಅವರು ಒಟ್ಟಾಗಿ inspection ಮಾಡಿ, ಯಾರು ಕೆಲಸ ಮಾಡಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಸರ್ಕಾರ ಹಿಂಜರಿಯುವುದಿಲ್ಲ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಈ ಗಲ್ಲಿಚೆಕ್ಸ್‌ಗಳ ನಿರ್ಮಾಣ, ಜಾನುವಾರು ನಿರೋಧಕ ಕಂದಕಗಳ ನಿರ್ಮಾಣ ಎಂದು ಉತ್ತರ ಕೊಟ್ಟಿದ್ದೀರಿ, ನಮ್ಮ ಕ್ಷೇತ್ರದಲ್ಲಿ ಆ ಕಾಡುಕೋಣಗಳೂ ಬಂದು ಬೆಳೆ ಹಾನಿ ಮಾಡುವಾಗ ನಾನೇ ಫೋನ್ ಮಾಡಿದ್ದೆ, ನಮಗೆ ಹಣವಿಲ್ಲವೆಂದು ಹೇಳಿದ್ದಾರೆ, ಅದೆಲ್ಲಿ ಕಂದಕ ತೋಡಿದ್ದಾರೋ ನಮಗೆ ಗೊತ್ತಿಲ್ಲ. ನಿಮ್ಮ ಇಲಾಖೆಯ ಈ ಫಂಡ್ಸ್‌ನಲ್ಲಿ ಕಂದಕವಾಗಿದೆಯೇ ಏನೋ ಗೊತ್ತಿಲ್ಲ. ದಯವಿಟ್ಟು ತಾವು ಎಲ್ಲೆಲ್ಲಿ ಕಂದಕವನ್ನು ತೋಡಿಸಿದ್ದಾರೆಂಬ ಬಗ್ಗೆ ಮಾಹಿತಿ ಕೊಡಬೇಕು.

ಶ್ರೀ ಸಿ.ಚೆನ್ನಿಗಪ್ಪ: ತಮ್ಮ ಮಾತು ಒಳ್ಳೆಯದಾಗಿದೆ, ಕೆಲವು ಕಡೆ ಕಂದಕಗಳನ್ನು ತೋಡಿಲ್ಲವೆಂಬ ರಿಪೋರ್ಟ್ ಬಂದಿವೆ. ಅವರು ಎಲ್ಲೆಲ್ಲಿ ಕಂದಕ ತೋಡಿಲ್ಲ, ಎಲ್ಲೆಲ್ಲಿ ಬೇಲಿಗಳನ್ನು ಹಾಕಿಲ್ಲ. ವೈರ್‌ಗಳನ್ನು ಹಾಕಿಲ್ಲವೆಂದು ಕಂಪ್ಲೇಂಟ್ ಬರೆದಿದ್ದಾರೆ. ಅದರ ಬಗ್ಗೆ ನಾನು ಇವತ್ತು ಎನ್‌ಕ್ವೈರಿ ಮಾಡಿ ಎಂದು ಬರೆದಿದ್ದೇನೆ. ತಾವು ಹೇಳಿರುವಂತೆ ಅದರ ಪ್ರಕಾರ ನಾವು inspection ಮಾಡಿ ತಮ್ಮ ತಾಲ್ಲೂಕನ್ನೇ ಉದಾಹರಣೆಯಾಗಿ ತೆಗೆದುಕೊಂಡು entire thing check ಮಾಡಿ ಮುಂದಿನ ಅಸೆಂಬ್ಲಿಯಲ್ಲಿ ತಮಗೆ ಉತ್ತರ ಕೊಡಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಸರ್ಕಾರಿ ಜಮೀನನ್ನು ಅನಧಿಕೃತ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುವುದು

65 (443) ಶ್ರೀ ನಾಗರಾಜು ಎಂ.ಟಿ.ಬಿ. (ಹೊಸಕೋಟೆ)– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಕೋಟೆ ತಾಲ್ಲೂಕು ಕಸಬಾ ಹೋಬಳಿಯ ಚಿಕ್ಕಹುಲ್ಲೂರು ಗ್ರಾಮದ ಸರ್ವೆ ನಂ.25 ಮತ್ತು ಬೊಕ್ಕಹಳ್ಳಿ ಗ್ರಾಮದ ಸರ್ವೆ ನಂ.45ರಲ್ಲಿ ಇರುವ ಸರ್ಕಾರಿ ಗೋಮಾಳ ಮತ್ತು ಗುಂಡುತೋಪೆಗಳ ವಿಸ್ತೀರ್ಣವೆಷ್ಟು;

ಆ) ಈ ಸರ್ವೆ ನಂಬರುಗಳಲ್ಲಿ ಎಷ್ಟು ಎಕರೆ ಜಮೀನನ್ನು ಭೂ ಮಂಜೂರಾತಿ ಸಮಿತಿಯಿಂದ ಅರ್ಹರಿಗೆ ಮಂಜೂರು ಮಾಡಲಾಗಿದೆ;

ಇ) ಈ ಸರ್ವೆ ನಂಬರುಗಳಲ್ಲಿ ಉಳಿಕೆಯಾಗಿರುವ ಜಮೀನಿಗೆ ಅನಧಿಕೃತ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ರೀತಿ ಮಾರಾಟದಿಂದ ನೋಂದಣಿಯಾಗಿರುವ ಜಮೀನಿಗೆ ಹೊಸಕೋಟೆ ತಾಲ್ಲೂಕು ತಹಶೀಲ್ದಾರರವರಿಂದ ಖಾತೆ ಮಾಡಿಕೊಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ;

ಉ) ಈ ರೀತಿ ಕ್ರಮ ಕೈಗೊಂಡಿದ್ದಲ್ಲಿ, ಇದು ನಿಯಮಾಬಾಹಿರವಲ್ಲವೆ?

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು)–

ಅ) ಹೊಸಕೋಟೆ ತಾಲ್ಲೂಕು, ಚಿಕ್ಕಹುಲ್ಲೂರು ಗ್ರಾಮದ ಸ.ನಂ.25 ಮತ್ತು ಚೊಕ್ಕಹಳ್ಳಿ ಗ್ರಾಮದ ಸ.ನಂ.45ರ ಒಟ್ಟು ವಿಸ್ತೀರ್ಣ ಕಂದಾಯ ದಾಖಲೆಗಳಲ್ಲಿ ಈ ಕೆಳಕಂಡತಿರುತ್ತದೆ.

ಕ್ರ.ಸಂ.	ಗ್ರಾಮ	ಸ.ನಂ.	ವಿಸ್ತೀರ್ಣ ಎ:ಗುಂ	ಭೂಮಿ ವರ್ಗೀಕರಣ
1	ಚಿಕ್ಕಹುಲ್ಲೂರು	25	211–14	ಸರ್ಕಾರಿ ಗೋಮಾಳ
2	ಚೊಕ್ಕಹಳ್ಳಿ	45	1–17	ಸರ್ಕಾರಿ ಗುಂಟೆ

ಆ) ಜಮೀನನ್ನು ಮಂಜೂರು ಮಾಡಲು ಯಾವುದೇ ಭೂ ಮಂಜೂರಾತಿ ಸಮಿತಿ ಇರುವುದಿಲ್ಲ. ಆದರೆ ಅಕ್ರಮ ಸಾಗುವಳಿಯಲ್ಲಿರುವ ಜಮೀನುಗಳನ್ನು ಸಕ್ರಮಗೊಳಿಸುವ ಸಲುವಾಗಿ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಇದ್ದು, ಚಿಕ್ಕಹುಲ್ಲೂರು ಗ್ರಾಮ ಸ.ನಂ.25ರಲ್ಲಿ ಹೊಸಕೋಟೆ ತಾಲ್ಲೂಕಿನ ಸದರಿ ಸಮಿತಿಯ ದಿ:25.11.1992 ಮತ್ತು 16.12.1992ರ ನಡವಳಿಕೆಗಳಂತೆ ಒಟ್ಟು 70 (ಎಪ್ಪತ್ತು) ಜನರಿಗೆ 160–00 ಎ:ಗುಂ ವಿಸ್ತೀರ್ಣ ಸಕ್ರಮೀಕರಣಗೊಳಿಸಲು ತೀರ್ಮಾನಿಸಲಾಗಿದೆ.

ಆದರೆ, ಚೊಕ್ಕಹಳ್ಳಿ ಗ್ರಾಮದ ಸ.ನಂ.45ರ 1–17 ಎಕರೆ:ಗುಂ ಜಮೀನು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯಿಂದ ಮಂಜೂರು ಆಗಿರುವುದಿಲ್ಲ.

ಇ) ಹೌದು, ಬಂದಿದೆ.

ಈ) ಚಿಕ್ಕಹುಲ್ಲೂರು ಗ್ರಾಮ ಸ.ನಂ.25ರಲ್ಲಿ ಬಗರ್ ಹುಕುಂ ಸಾಗುವಳಿ ಸಮಿತಿಯ ವಿವಾದಾಸ್ಪದ ಮಂಜೂರಾತಿ ವಿರುದ್ಧ ಬಂದಿರುವ ದೂರುಗಳನ್ನಾಧರಿಸಿ ಉಪವಿಭಾಗಾಧಿಕಾರಿಯವರ ಬಳಿ ಮೇಲ್ಮನವಿ

ದಾಖಲಾಗಿರುವ 160–00 ಎ:ಗುಂ ಹೊರತು ಪಡಿಸಿದಂತೆ, ಬಾಕಿ ಉಳಿದಿರುವ ವಿಸ್ತೀರ್ಣದಲ್ಲಿ ಒಟ್ಟು 64–00 ಎಕರೆಗೆ 17 ಜನರ ಹೆಸರಿನಲ್ಲಿ ಅಕ್ರಮ ದಾಖಲೆಗಳು ಸೃಷ್ಟಿಯಾಗಿದ್ದು, ಈ ಅಕ್ರಮ ದಾಖಲೆಗಳ ಆಧಾರದ ಮೇಲೆ ಕಂದಾಯ ಮತ್ತು ಮೋಜಣಿ ಇಲಾಖೆ ಅಧಿಕಾರಿಗಳ ಸಾಮೀಲಿನಿಂದ ಪೋಡಿ ದುರಸ್ತಿ ಸಹಾ ಆಗಿ, ಹೊಸ ಸ.ನಂ. 54 ರಿಂದ 72 ಎಂದು ಕಂದಾಯ ದಾಖಲೆಗಳಲ್ಲಿ (ಆರ್‌ಟಿಸಿ) ನಮೂದಿಸಿ ಮಾರಾಟ ಮಾಡಿರುವುದಾಗಿ ಕಂಡು ಬಂದಿರುತ್ತದೆ.

ಅದೇ ರೀತಿ ಚೊಕ್ಕಹಳ್ಳಿ ಗ್ರಾಮದ ಸ.ನಂ.45ರ 1–17 ಎ:ಗುಂ ವಿಸ್ತೀರ್ಣಕ್ಕೂ ಸಹ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಖಾತೆ ಬದಲಾವಣೆ ಮಾಡಿ ಮಾರಾಟ ಮಾಡಲಾಗಿರುತ್ತದೆ.

ಉ) ಚಿಕ್ಕಹುಲ್ಲೂರು ಗ್ರಾಮದ ಸ.ನಂ.25ರಲ್ಲಿ 64.00 ಎಕರೆ ಮತ್ತು ಚೊಕ್ಕಹಳ್ಳಿ ಗ್ರಾಮದ ಸ.ನಂ.45ರಲ್ಲಿ 1–17ಎ:ಗುಂ ವಿಸ್ತೀರ್ಣಕ್ಕೆ ಕಂದಾಯ ದಾಖಲೆಗಳಲ್ಲಿ ಅಕ್ರಮವಾಗಿ ಸರ್ಕಾರಿ ಭೂಮಿಯ ಮೇಲೆ ಸೃಷ್ಟಿಸಿರುವ ದಾಖಲೆಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136 (3)ರಡಿ ಜಿಲ್ಲಾಧಿಕಾರಿಗಳಿಗೆ ಇರುವ ಅಧಿಕಾರದ ಮೇಲೆ ಸ್ವಯಂಪ್ರೇರಣೆ ಮೇರೆಗೆ ಪ್ರಕರಣ ದಾಖಲಿಸಿಕೊಂಡು, ಅಕ್ರಮ ದಾಖಲೆಗಳನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಹಾಗೂ ಈ ಅಕ್ರಮ ದಾಖಲೆಗಳ ಸೃಷ್ಟಿಗೆ ಕಾರಣರಾದ ಕಂದಾಯ ಮತ್ತು ಮೋಜಣಿ ಇಲಾಖೆಯ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

ಶ್ರೀ ಎಂ.ಟಿ.ಬಿ.ನಾಗರಾಜು: ಉತ್ತರದಲ್ಲಿ ``17 ಜನರ ಹೆಸರಿನಲ್ಲಿ ಅಕ್ರಮ ದಾಖಲೆಗಳು ಸೃಷ್ಟಿಯಾಗಿದ್ದು, ಈ ಅಕ್ರಮ ದಾಖಲೆಗಳ ಆಧಾರದ ಮೇಲೆ ಕಂದಾಯ ಮತ್ತು ಮೋಜಣಿ ಇಲಾಖೆ ಅಧಿಕಾರಿಗಳ ಸಾಮೀಲಿನಿಂದ ಪೋಡಿ ದುರಸ್ತಿ ಸಹಾ ಆಗಿ, ಹೊಸ ಸ.ನಂ.54 ರಿಂದ 72 ಎಂದು ಕಂದಾಯ ದಾಖಲೆಗಳಲ್ಲಿ (ಆರ್‌ಟಿಸಿ) ನಮೂದಿಸಿ ಮಾರಾಟ ಮಾಡಿರುವುದಾಗಿ ಕಂಡು ಬಂದಿರುತ್ತದೆ'' ಎಂದು ಹೇಳಿದ್ದಾರೆ.

ಅದೇರೀತಿ "ಚೊಕ್ಕಹಳ್ಳಿ ಗ್ರಾಮದ ಸ.ನಂ. 45 ರ 1–17 ಎ:ಗುಂ ವಿಸ್ತೀರ್ಣಕ್ಕೂ ಸಹ ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ಖಾತೆ ಬದಲಾವಣೆ ಮಾಡಿ ಮಾರಾಟ ಮಾಡಲಾಗಿರುತ್ತದೆ. ಚಿಕ್ಕಹುಲ್ಲೂರು ಗ್ರಾಮದ ಸ.ನಂ. 25 ರಲ್ಲಿ

64–00 ಎಕರೆ ಮತ್ತು ಚೊಕ್ಕಹಳ್ಳಿ ಗ್ರಾಮದ ಸ.ನಂ.45ರಲ್ಲಿ 1–17 ಎ:ಗುಂ ವಿಸ್ತೀರ್ಣಕ್ಕೆ ಕಂದಾಯ ದಾಖಲೆಗಳಲ್ಲಿ ಅಕ್ರಮವಾಗಿ ಸರ್ಕಾರಿ ಭೂಮಿಯ ಮೇಲೆ ಸೃಷ್ಟಿಸಿರುವ ದಾಖಲೆಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(3)ರಡಿ ಜಿಲ್ಲಾಧಿಕಾರಿಗಳಿಗೆ ಇರುವ ಅಧಿಕಾರದ ಮೇಲೆ ಸ್ವಯಂಪ್ರೇರಣೆ ಮೇರೆಗೆ ಪ್ರಕರಣವನ್ನು ದಾಖಲಿಸಿಕೊಂಡು, ಅಕ್ರಮ ದಾಖಲೆಗಳನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ ಹಾಗು ಈ ಅಕ್ರಮ ದಾಖಲೆಗಳ ಸೃಷ್ಟಿಗೆ ಕಾರಣರಾದ ಕಂದಾಯ ಮತ್ತು ಮೋಜಣಿ ಇಲಾಖೆಯ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು`` ಎಂದು ಇವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಇದು ಸರ್ವೆ ನಂ. 25, ಚಿಕ್ಕಹುಲ್ಲೂರು ಗ್ರಾಮ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಗೋಮಾಳ ಜಮೀನು. ಸುಮಾರು 56 ಎಕರೆ ಜಮೀನನ್ನು ಬೇರೆಯವರಿಗೆ 10.00 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಮಾರಾಟ ಮಾಡಿರುವವರು ಶ್ರೀ ಮಂಜುನಾಥ್ ಎನ್ನುವವರು ಅವರು ಕೆ.ಎಂ.ಎಫ್.ನ ನಿರ್ದೇಶಕರು ಆಗಿದ್ದಾರೆ, ಆ ನಮ್ಮ ಹೊಸಕೋಟೆ ತಾಲ್ಲೂಕಿನ ಜಾತ್ಯತೀತ ದಳದ ಅಧ್ಯಕ್ಷರೂ ಆಗಿದ್ದಾರೆ. ಅವರ ತಂದೆ ಅದೇ ಗ್ರಾಮಪಂಚಾಯ್ತಿಯ ಅಧ್ಯಕ್ಷರೂ ಆಗಿದ್ದಾರೆ. ಸುಮಾರು 10.00 ಕೋಟಿ ರೂ.ಗಳಿಗೆ ಆ ಜಮೀನನ್ನು ಮಾರಾಟ ಮಾಡಿರುವುದಕ್ಕೆ ಎಲ್ಲಾ ದಾಖಲೆಗಳು, ಪುರಾವೆಗಳು ನನ್ನಲ್ಲಿ ಇವೆ. ಇದು ಸುಮಾರು 164 ಎಕರೆ ಗೋಮಾಳ 10.00 ಕೋಟಿ ರೂ.ಗಳಿಗೆ ಮಾರಾಟವಾಗಿದೆ, ಅದರ ಪಕ್ಕದಲ್ಲಿ 50.00 ಲಕ್ಷ ರೂ.ಗಳಿಗೆ ಈಗ ಒಂದು ವಾರದಲ್ಲಿ ಮಾರಾಟವಾಗಿದೆ. ಇದು ರಿಜಿಸ್ಟರ್ ಆಗಿ ಸುಮಾರು 2 ತಿಂಗಳುಗಳಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಮಂತ್ರಿಗಳಿಗೂ ಸಹ ಪತ್ರವನ್ನು ಬರೆದಿದ್ದೇನೆ. ಇವತ್ತು ಅಕ್ರಮವಾಗಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ ಸರ್ಕಾರದ 100 ಕೋಟಿ ರೂ.ಗಳ ಆಸ್ತಿಯನ್ನು 10.00 ಕೋಟಿ ರೂ.ಗಳಿಗೆ ಖಾಸಗಿಯವರಿಗೆ ಮಾರಾಟ ಮಾಡಿದ್ದಾರೆ. ಈಗಾಗಲೇ ಅವರು ಕಾಂಪೌಂಡ್‌ಅನ್ನು ನಿರ್ಮಾಣ ಮಾಡುತ್ತಿರುವ ಬಗ್ಗೆ ನಾನು ಮೂರು ದಿನಗಳಲ್ಲಿ ಫೋಟೋ ತೆಗೆಸಿದ್ದೇನೆ. ಆ ಫೋಟೋಗಳನ್ನು ಜಿಲ್ಲಾಧಿಕಾರಿಗಳಿಗೆ ತೋರಿಸಿದ್ದೇನೆ. ಇದುವರೆಗೂ ಆ ಕಾಂಪೌಂಡ್ ನಿರ್ಮಾಣ ಮಾಡುವುದನ್ನು ಅವರು ನಿಲ್ಲಿಸಲಿಲ್ಲ. ಇಂತಹ ಆಸ್ತಿಯನ್ನು ಜನಪ್ರತಿನಿಧಿಗಳಾಗಿ 10 ವರ್ಷಗಳ ಕಾಲ ತಾಲ್ಲೂಕಿನ

ಪ್ರತಿನಿಧಿಗಳಾಗಿ ಕೆಲಸ ಮಾಡಿದ್ದಾರೆ, ಶ್ರೀ ಮಂಜುನಾಥ್ ಎನ್ನುವವರೇ ಈ ಆಸ್ತಿಯನ್ನು ಮಾರಾಟ ಮಾಡಿದ್ದಾರೆ. ಎ.ಟಿ.ರಾಮಸ್ವಾಮಿಯವರ ಸದನ ಸಮಿತಿಯಿದೆ, ಇವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಏನು ಆಸ್ತಿಗಳಿವೆ, ನೂರು ಕೋಟಿ ರೂ.ಗಳ ಆಸ್ತಿಯಿದು, ಅದರ ಬಗ್ಗೆ ಎಲ್ಲಾ ದಾಖಲಾತಿಗಳಿವೆ. 2006–2007ರ ಪಾಣಿಯಲ್ಲಿ ಗೋಮಾಳವೆಂದು 167 ಎಕರೆ ಇದೆ. ಈ ರೀತಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಮಾರಾಟ ಮಾಡಿದ್ದಾರೆ. ಇವರ ಮೇಲೆ ಏನು ಕ್ರಮ ಜರುಗಿಸಿದ್ದಾರೆಂದು ಮಾನ್ಯ ಮಂತ್ರಿಗಳು ಸದನದಲ್ಲಿ ಉತ್ತರಿಸಬೇಕು.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ಶಾಸಕರಾದ ನಾಗರಾಜುರವರು ಕೇಳಿರುವ ಪ್ರಶ್ನೆಗೆ ವಿವರವಾದಂಥ ಮಾಹಿತಿಯನ್ನು ಲಿಖಿತ ಉತ್ತರದ ಮೂಲಕ ಮಾಹಿತಿಯನ್ನು ಕೊಟ್ಟಿದ್ದೇವೆ. ಈ ಚಿಕ್ಕಹುಲ್ಲೂರು ಗ್ರಾಮದ ಸ.ನಂ.25,211 ಎಕರೆ 14 ಗುಂಟೆ, ಇದು ಸರ್ಕಾರಿ ಗೋಮಾಳ ಜಮೀನು. ಇದರಲ್ಲಿ 160 ಎಕರೆ ಜಮೀನು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಖಾಂತರ ಅಲ್ಲಿ ಮಂಜೂರಾದುದು, ಆದರೆ ಅದರ ಬಗ್ಗೆ ಕೆಲವೊಂದು ತಕರಾರು ಬಂದಿದ್ದರಿಂದ ಇವತ್ತು ಅಸಿಸ್ಟೆಂಟ್ ಕಮಿಷನರ್‌ರವರು ಮೇಲ್ಮನವಿಯನ್ನು ತೆಗೆದುಕೊಂಡು ಅದರ ಬಗ್ಗೆ ವಿಚಾರಣೆಯನ್ನು ನಡೆಸುತ್ತಿದ್ದಾರೆ, ಉಳಿದಂಥ 51 ಎಕರೆ ಬಗ್ಗೆ 17 ಜನರ ಹೆಸರಿನಲ್ಲಿ ಅಕ್ರಮವಾದಂಥ ದಾಖಲೆಗಳನ್ನು ಆಧಾರದ ಮೇಲೆ ಪೋಡಿ ದುರಸ್ತಿ ಸಹ ಮಾಡಿ ಸ.ನಂ.54 ರಿಂದ 72 ಎಂದು ಕಂದಾಯ ಇಲಾಖೆಯ ದಾಖಲೆಗಳಲ್ಲಿ ಅದನ್ನು ಎಂಟ್ರಿ ಮಾಡಿಸಿದ್ದು ಇದೆ. ಹೀಗಾಗಿ ಇದು ಸರ್ಕಾರದ ಗಮನಕ್ಕೆ ಬಂದ ಮೇಲೆ, ಕಂದಾಯ ಇಲಾಖೆಯ ಗಮನಕ್ಕೆ ಬಂದ ತಕ್ಷಣ ಈ ರೀತಿಯ 17 ಜನರು ಅಕ್ರಮವಾಗಿ ಈ ದಾಖಲೆಗಳನ್ನು ಸೃಷ್ಟಿಸಿದವರ ಬಗ್ಗೆ ಈಗಾಗಲೇ ಸರ್ಕಾರ ತನಿಖೆ ಮಾಡಿದೆ. ಯಾರು ಈ 17 ಜನರು ಅಕ್ರಮವಾಗಿ ತಮ್ಮ ಹೆಸರುಗಳನ್ನು ದಾಖಲಿಸಿಕೊಂಡಿದ್ದಾರೆ ಮತ್ತು ಅದರ ಜೊತೆಗೆ ಯಾವ ಅಧಿಕಾರಿಗಳು ಇದರಲ್ಲಿ ಸಾಮೀಲಾಗಿದ್ದಾರೆ, ಅವರ ಮೇಲೆ ಸೂಕ್ತವಾದ ಎಲ್ಲಾ ರೀತಿಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಎಲ್ಲಾ ರೀತಿಯ ಮೊಕದ್ದಮೆಗಳನ್ನು ಹೂಡುವಂತಹ ಕೆಲಸಗಳನ್ನು ನಾವು ಮಾಡುತ್ತೇವೆ. ಯಾವುದೇ ಅಕ್ರಮ ಚಟುವಟಿಕೆ, ಅಕ್ರಮವಾಗಿ ಈ ರೀತಿಯ ಸರ್ಕಾರಿ

ಜಮೀನನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು, ದಾಖಲೆಗಳನ್ನು ಸೃಷ್ಟಿಸುವಂಥಾದ್ದು, ಇಂತಹದ್ದಕ್ಕೆ ಸರ್ಕಾರ ಅವಕಾಶ ಕೊಡುವುದಿಲ್ಲ. ಅದಕ್ಕಾಗಿ ಈಗಾಗಲೇ ordinance ಕೊಡಿಸಿದ್ದೇವೆ. ಅದರ ಪ್ರಕಾರವೂ ಕ್ರಮವನ್ನು ಕೈಗೊಂಡಿದ್ದೇವೆ ಹಾಗೆಯೇ specific ಆಗಿ ಈ ಜಮೀನಿನ ಬಗ್ಗೆಯೂ ನಾವು ಕ್ರಮವನ್ನು ಕೈಗೊಂಡಿದ್ದೇವೆ.

ಶ್ರೀ ಎಂ.ಟಿ.ಬಿ. ನಾಗರಾಜ್: ಅಲ್ಲಿ ಕಾಂಪೌಂಡ್ ಕೆಲಸ ನಡೆಯುತ್ತಿದೆ. ನಾನು ಎರಡು ದಿವಸಗಳ ಹಿಂದೆ ಫೋಟೋ ತೆಗೆದುಕೊಂಡು ಬಂದಿದ್ದೇನೆ. ಜಿಲ್ಲಾಧಿಕಾರಿಗಳಿಗೆ ಮತ್ತು ಕಂದಾಯ ಇಲಾಖಾಧಿಕಾರಿಗಳಿಗೆ ಫೋಟೊ ಸಮೇತ ತೋರಿಸಿದ್ದೇವೆ. ಆದರೂ ಕಾಂಪೌಂಡ್ ಕೆಲಸ ನಿಲ್ಲಿಸಲಿಲ್ಲ. ಈಗಾಗಲೇ ಸರ್ಕಾರ ಒಪ್ಪಿಕೊಂಡಿದ್ದಾರೆ. 17 ಜನರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿ 56 ಎಕರೆ ಜಮೀನನ್ನು 10 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಇದು ತಪ್ಪಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹಾಗಾದರೆ ಈ ಕಾಂಪೌಂಡ್ ಕೆಲಸ ಏತಕ್ಕೆ ನಿಲ್ಲಿಸಲಿಲ್ಲ. ಈ ಅಧಿಕಾರಿಗಳ ಮೇಲೆ ಏನು ಕ್ರಮ ಜರುಗಿಸಿದ್ದಾರೆ? ಅವರನ್ನೇಕೆ ಸಸ್ಪೆಂಡ್ ಮಾಡಲಿಲ್ಲ. ಜನಪ್ರತಿನಿಧಿಗಳಾಗಿ ಕೆಲಸ ಮಾಡಿದ್ದಾರಲ್ಲಾ, ಆ ಭಾಗದಲ್ಲಿ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದಾರೆ. ಕೆ.ಎಮ್.ಎಫ್.ನ ನಿರ್ದೇಶಕರಾಗಿದ್ದಾರೆ. ಹತ್ತು ವರ್ಷಗಳ ಕಾಲ ಆ ತಾಲ್ಲೂಕಿನ ಮುಖಂಡರಾಗಿದ್ದಾರೆ. ಇವತ್ತು ಜನಪ್ರತಿನಿಧಿಗಳಾಗಿರುವವರೇ ಸರ್ಕಾರದ ನೂರು ಕೋಟಿ ರೂಪಾಯಿಗಳ ಆಸ್ತಿ ಹತ್ತು ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆ. ಅವರ ಹೆಸರಿನಲ್ಲೇ ಅಂದರೆ ಸಿ.ಮಂಜುನಾಥ್ ಎನ್ನುವವರ ಹೆಸರಿನಲ್ಲೇ ರಿಜಿಸ್ಟರ್ ಆಗಿದೆ. ರಿಜಿಸ್ಟರ್ ಪತ್ರ ನನ್ನ ಕೈಯಲ್ಲಿದೆ. ಬೇಲಿಯೇ ಎದ್ದು ಹೊಲವನ್ನು ಮೇಯುತ್ತಿದೆ. ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿದೆ. ಶ್ರೀ ಎ.ಟಿ.ರಾಮಸ್ವಾಮಿಯವರ ಸದನದ ಸಮಿತಿಯ ವರದಿಯ ಮೇಲೆ ಅಂತಹವರನ್ನು ಜೈಲಿಗೆ ಹಾಕುತ್ತೇವೆಂದು ಹೇಳಿದ್ದೀರಿ. ಈ ಕೇಸು ನೂರು ಕೋಟಿ ರೂಪಾಯಿಗಳ ಸರ್ಕಾರಿ ಆಸ್ತಿ ಅದನ್ನು ಮಾರಾಟ ಮಾಡಿದ್ದಾರೆ. ಇದರ ಮೇಲೆ ತಾವು ಜರೂರಾಗಿ ಕ್ರಮ ಜರುಗಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಕಾನೂನು ಕ್ರಮವನ್ನು ಕೈಗೊಂಡಿದ್ದೇವೆ. ಇನ್ನು ಮುಂದೆ ಯಥಾಸ್ಥಿತಿಯನ್ನು ಕಾಯ್ದುಕೊಂಡು

ಹೋಗುವ ರೀತಿಯಲ್ಲಿ ಎಲ್ಲಾ ರೀತಿಯ ಕ್ರಮವನ್ನು ಕೈಗೊಳ್ಳುತ್ತೇವೆ. ಆ ಜಮೀನನ್ನು ಸರ್ಕಾರಕ್ಕೆ ಉಳಿಸುವ ರೀತಿಯಲ್ಲಿ ಎಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ.ಕೆ.ಶಿವಕುಮಾರ್: ಮಾಡುತ್ತೀರಿ ಸ್ವಾಮಿ, ತಮ್ಮ ಅಧಿಕಾರಿಗಳು ಈಗಾಗಲೇ ತಮಗೆ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ನೀವು ಒಪ್ಪಿಕೊಂಡಿದ್ದೀರಿ. ಈ ರೀತಿ ಆಗಿದೆಯೆಂದು. ಮಾನ್ಯ ಸದಸ್ಯರು ಬಹಳ ಸಿಂಪಲ್ ಆಗಿ ಕೇಳುತ್ತಿದ್ದಾರೆ. ನಿನ್ನೆಯೂ ಸಹ ನಾನು ಹೋಗಿದ್ದೇನೆ. ಕಾಂಪೌಂಡ್ ಕೆಲಸ ನಡೆಯುತ್ತಿದೆ. ಇಷ್ಟೆಲ್ಲಾ ಆಗಿದೆಯಲ್ಲಾ ನಾಳೆ ಸಾಯಂಕಾಲದ ವೇಳೆಗೆ ನಾವು ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೇನೆಂದು ಒಂದು ಟೈಮ್ ಕೊಟ್ಟರೆ ಮುಗಿದುಹೋಯಿತು. ಈಗಾಗಲೇ ನಿಮ್ಮ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಅವರು ಮಾಹಿತಿಯನ್ನು ಮುಚ್ಚಿಟ್ಟಿಲ್ಲ.

ಶ್ರೀ ಜಗದೀಶ್ ಶೆಟ್ಟರ್: 18,000 ಎಕರೆ ಜಮೀನನ್ನು ಯಾರ್ಯಾರು ಅತಿಕ್ರಮಣ ಮಾಡಿದ್ದಾರೆ. ಅದನ್ನು ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದಕ್ಕೆ ಕಾನೂನನ್ನು ಮಾಡಿದ್ದೇವೆ. ಯಾರೂ ಈ ರೀತಿಯ ಅತಿಕ್ರಮಣವನ್ನು ಮಾಡುತ್ತಿದ್ದಾರೆ. ಅದಕ್ಕೆ ಯಾವ ಅಧಿಕಾರಿಗಳು ಸಾಮೀಲಾಗಿದ್ದಾರೆ, ಅಂತಹವರ ಮೇಲೆ ಕಾನೂನು ಕ್ರಮವನ್ನು ಕೈಗೊಳ್ಳುವಂಥಾದ್ದು ಅವರಿಗೆ ಜೈಲುವಾಸ ಮಾಡುವಂಥಾದ್ದು ಪೆನಾಲ್ಟಿ ಹಾಕುವುದು ಮೊದಲಾದ ದಿಟ್ಟವಾದ ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ. ಹೀಗಾಗಿ ಈ ಜಮೀನಿನ ಬಗ್ಗೆಯೂ ಸಹ ಎಲ್ಲಾ ರೀತಿಯ ಕ್ರಮವನ್ನು ಕೈಗೊಳ್ಳುತ್ತೇವೆ ಮತ್ತು ನಾನು ಈಗಾಗಲೇ ಹೇಳಿದ ಹಾಗೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಬೇಕು ಎಂದರೆ ಇದೆಲ್ಲಾ ಬರುತ್ತದೆ. ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವ ಬಗ್ಗೆಯೂ ಸಹ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಸಹ ಕೊಡುತ್ತೇನೆ. ಹೀಗಾಗಿ ಇದರಲ್ಲಿ ಹಿಂದೇಟು ಹಾಕುವಂಥ ಪ್ರಶ್ನೆಯೇ ಇಲ್ಲ. ಅವರು ಯಾವುದೇ ವ್ಯಕ್ತಿಗಳಾಗಿರಲಿ, ಅವರ ಮೇಲೆ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ.ಕೆ.ಶಿವಕುಮಾರ್: ನಿಮ್ಮ ಉತ್ತರದಿಂದ ನಿಮ್ಮ ಪ್ರಾಮಾಣಿಕತೆ ನಮಗೆ ಅರ್ಥವಾಗುತ್ತದೆ. ನೀವು ಬಹಳ ಪಾರದರ್ಶಕರಾಗಿದ್ದೀರಿ. ಅದರಲ್ಲೇನು

ಮಾತಿಲ್ಲ. ನಾನು ಹೇಳುವುದೇನೆಂದರೆ ನೀವು ಇವತ್ತಿನಿಂದಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಕೆಲಸ ಶುರು ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗುವಂತೆ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ಇದರಲ್ಲಿ ಅಧಿಕಾರಿಗಳು ಸಾಮೀಲಾಗಿದ್ದಾರೆ. ಅವರನ್ನು ಸಸ್ಪೆಂಡ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: Investigation ನಡೆಯುತ್ತಿದೆ. ಅಧಿಕಾರಿಗಳ ಹೆಸರು ಬರುತ್ತಿದೆ. ಯಾರು ಅತಿಕ್ರಮಣ ಮಾಡಿದ್ದಾರೆ. ಅವರ ಹೆಸರುಗಳು ಬರುತ್ತಿವೆ, ಈ ಬಗ್ಗೆ ಪ್ರೊಸೆಸ್ ನಡೆಯುತ್ತಿದೆ. ಶೀಘ್ರದಲ್ಲೇ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಶಾಸಕರೇನು ಹೇಳುತ್ತಿದ್ದಾರೆಂದರೆ, ಅಲ್ಲಿ ಕೆಲಸ ನಡೆಯುತ್ತಿದೆ, ತಕ್ಷಣ ನಿಲ್ಲಿಸಿ ಎಂದು ಹೇಳುತ್ತಿದ್ದಾರೆ. ತಕ್ಷಣ ನಿಲ್ಲಿಸುತ್ತೀರೋ ಹೇಳಿ.

ಶ್ರೀ ಜಗದೀಶ್ ಶೆಟ್ಟರ್: ಸೂಚನೆಯನ್ನು ಕೊಡುತ್ತೇನೆಂದು ಹೇಳಿದ್ದೇನೆ. ಅಲ್ಲಿ ಕೆಲಸ ನಡೆಯಬಾರದು, ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಬೇಕೆಂದು ನಾನು ಸೂಚನೆ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್.ಎಸ್.ಪಾಟೀಲ್: ಆದಾಗ್ಯೂ ಅಲ್ಲಿ ಕೆಲಸ ನಡೆಯುತ್ತಿದ್ದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವಿರಾ?

ಶ್ರೀ ಜಗದೀಶ್ ಶೆಟ್ಟರ್: ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ.

ಬಯಲುಸೀಮೆ ಪ್ರದೇಶ ಅಭಿವೃದ್ಧಿ

66 (772) : ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕನ್ನು ಯಾವುದೇ ಪ್ರದೇಶಾಭಿವೃದ್ಧಿ ಮಂಡಳಿಗಳಲ್ಲಿ ಸೇರಿಸದೆ ಇರಲು ಕಾರಣಗಳೇನು ಹಾಗೂ ಈ ಮಂಡಳಿಗಳಲ್ಲಿ ಸೇರದೇ ಇರುವ ತಾಲ್ಲೂಕುಗಳು ಯಾವುವು;

ಆ) ವಿವಿಧ ಪ್ರದೇಶಾಭಿವೃದ್ಧಿ ಮಂಡಳಿಗಳಿಗೆ ಒದಗಿಸಿದ ಹಣಕಾಸಿನ ಸೌಲಭ್ಯವೆಷ್ಟು; (ಮಂಡಳಿವಾರು ವಿವರ ಒದಗಿಸುವುದು);